# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಿವಿಲ್ ಮತ್ತು ನಿರ್ಮಾಣ ಕಾಮಗಾರಿಗೆ ಅನುದಾನ ಹಂಚಿಕೆ ಮಾಡುವ ಕುರಿತು.

**ಉಲ್ಲೇಖ:**

1. ಸರ್ಕಾರದ ಆದೇಶ ಸಂಖ್ಯೆ: ಲೋಇ 612 ಆಕೋ-2/2009, ಬೆಂಗಳೂರು, ದಿನಾಂಕ:9ನೇ ಜೂನ್ 2009.
2. ಸರ್ಕಾರದ ಆದೇಶ ಸಂ:PWD 671 FC-1/2009, ಬೆಂಗಳೂರು, ದಿನಾಂಕ:03.02.2010.
3. ಸುತ್ತೋಲೆ ಸಂ:FD 14 BPE 2012, ದಿನಾಂಕ:12.10.2012.
4. ಸರ್ಕಾರದ ಆದೇಶ ಸಂ:ಲೋಇ 272 ಆಕೋ-2/2013, ಬೆಂಗಳೂರು, ದಿನಾಂಕ:24.04.2013.

**********

**ಓದಲಾಗಿದೆ;**

ಮೇಲೆ ಓದಲಾದ ಸರ್ಕಾರದ ಆದೇಶ ಮತ್ತು ಸುತ್ತೋಲೆಗಳಲ್ಲಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನುದಾನ ಹಂಚಿಕೆ ಮಾಡುವ ಕುರಿತು ಸೂಚನೆಗಳನ್ನು ನೀಡಲಾಗಿರುತ್ತದೆ. ಪ್ರಸಕ್ತ ಆಡಳಿತ ಇಲಾಖೆಗಳಿಂದ ಹಲವಾರು ನಿರ್ಮಾಣ ಕಾಮಗಾರಿಗಳು ಮತ್ತು ಇತರೆ ಸಿವಿಲ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಿದ್ದು, ಅಗತ್ಯ ಆಯವ್ಯಯ/ಅನುದಾನದ ಲಭ್ಯತೆ ಇರದೇ ಕಾಮಗಾರಿ ಅನುಷ್ಠಾನಕ್ಕೆ ಅನುಮೋದನೆ ನೀಡಲು ಕ್ರಮವಹಿಸಲಾಗುತ್ತಿದೆ ಹಾಗೂ ಮುಂದುವರೆದ ಕಾಮಗಾರಿಗಳಿಗೆ ಅಗತ್ಯ ಅನುದಾನವನ್ನು ಹಂಚಿಕೆ ಮಾಡದೇ ಆಯವ್ಯಯದಲ್ಲಿ ಒದಗಿಸಿದ ಪೂರ್ಣ ಮೊತ್ತವನ್ನು ಹೊಸ ಕಾಮಗಾರಿಗಳಿಗೆ ಹಂಚಿಕೆ ಮಾಡುವುದಲ್ಲದೇ, ತೆಗೆದುಕೊಳ್ಳುವ ಕಾಮಗಾರಿಗಳಿಗೆ ಅಗತ್ಯಕ್ಕಿಂತ ಕಡಿಮೆ ಮೊತ್ತವನ್ನು ಹಂಚಿಕೆ ಮಾಡಿ ಹೆಚ್ಚಿನ ಸಂಖ್ಯೆಯ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತಿರುವುದನ್ನು ಗಮನಿಸಲಾಗಿದೆ. ಇದರಿಂದಾಗಿ ಹೆಚ್ಚಿನ ಹಣಕಾಸು ಬದ್ಧತೆ (Financial Commitment) ಉಂಟಾಗುವುದಲ್ಲದೆ ಕಾಮಗಾರಿಗಳನ್ನು ತ್ವರಿತ ಗತಿಯಲ್ಲಿ ಮತ್ತು ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಲು ಹಿನ್ನಡೆ ಉಂಟಾಗುತ್ತಿದೆ. ಅಲ್ಲದೆ, ಕಾಮಗಾರಿಗಳ ಅಂದಾಜು ವೆಚ್ಚದಲ್ಲಿ ಗಣನೀಯ ಹೆಚ್ಚಳವಾಗಿರುವುದರಿಂದ ಅನುದಾನ ಹಂಚಿಕೆ ಮೊತ್ತವನ್ನು ಪರಿಷ್ಕರಿಸಬೇಕಾದ ಅಗತ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ ನಿರ್ಮಾಣ ಕಾಮಗಾರಿಗಳೂ (Construction Works) ಸೇರಿದಂತೆ ಎಲ್ಲಾ ತರಹದ ಹೊಸ ಮತ್ತು ಮುಂದುವರೆದ (On going) ಸಿವಿಲ್ ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಆಯವ್ಯಯ/ಅನುದಾನ ಏರ್ಪಾಡು ಮಾಡಿಕೊಳ್ಳುವುದರ ಕುರಿತು ವಿವರವಾದ ಸೂಚನೆಗಳನ್ನು ನೀಡುವುದು ಅವಶ್ಯವೆಂದು ಪರಿಗಣಿಸಲಾಗಿರುತ್ತದೆ.

ಆದ್ದರಿಂದ, ಈ ಕೆಳಗಿನಂತೆ ಆದೇಶ.

**ಸರ್ಕಾರದ ಆದೇಶ ಸಂ:ಆಇ 127 ವೆಚ್ಚ-12/2023, ಬೆಂಗಳೂರು, ದಿನಾಂಕ:16.05.2023.**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಅನುಷ್ಠಾನವಾಗುತ್ತಿರುವ ಎಲ್ಲಾ ತರಹದ ನಿರ್ಮಾಣ ಕಾಮಗಾರಿಗಳು (Construction Works) ಮತ್ತು ಸಿವಿಲ್ ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಈ ಕೆಳಗಿನಂತೆ ಅನುದಾನದ ಅವಕಾಶ ಮಾಡಿಕೊಳ್ಳಲು ಕ್ರಮವಹಿಸುವಂತೆ ತಿಳಿಸಿದೆ.

1. **ಮುಂದುವರೆದ ಕಾಮಗಾರಿಗಳು** : ಆಯಾ ಆರ್ಥಿಕ ವರ್ಷದಲ್ಲಿ ಒದಗಿಸಿದ ಆಯವ್ಯಯ ಅನುದಾನದಲ್ಲಿ ಮುಂದುವರೆದ ಕಾಮಗಾರಿಗಳಿಗೆ ಅಗತ್ಯ ಅನುದಾನವನ್ನು ಒದಗಿಸಿಕೊಳ್ಳುವುದು ಮೊದಲ ಆದ್ಯತೆಯಾಗಿರಬೇಕಾಗುತ್ತದೆ. ಆದ್ದರಿಂದ, ಮುಂದುವರೆದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಈ ಕೆಳಗಿನಂತೆ ಕ್ರಮವಹಿಸತಕ್ಕದ್ದು.

(i) ಈಗಾಗಲೇ ಅನುಮೋದನೆಯಾದ ಕಾಮಗಾರಿಗಳ ಬಾಕಿ ಕಾರ್ಯಭಾರ (Balance Cost of works) ವು ಆಯವ್ಯಯದಲ್ಲಿ ಒದಗಿಸಿದ ಮೊತ್ತಕ್ಕಿಂತ ಕಡಿಮೆಯಿದ್ದಲ್ಲಿ, ಮುಂದುವರೆದ ಕಾಮಗಾರಿಗಳಿಗೆ ಈ ಕೆಳಗಿನಂತೆ ಅನುದಾನ ಹಂಚಿಕೆ ಮಾಡತಕ್ಕದ್ದು:

ಅ) ಕಾಮಗಾರಿಗಳ ಬಾಕಿ ಕಾರ್ಯಭಾರ (Balance Cost of Works) ದ ಮೊತ್ತವು ಆಯವ್ಯಯದಲ್ಲಿ ನಿಗದಿಯಾದ ಅನುದಾನದ ಶೇ.50 ಕ್ಕಿಂತ ಕಡಿಮೆಯಿದ್ದಲ್ಲಿ ಬಾಕಿ ಕಾರ್ಯಭಾರದ ಪೂರ್ಣ (ಶೇ.100) ಮೊತ್ತವನ್ನು ಹಂಚಿಕೆ ಮಾಡತಕ್ಕದ್ದು.

ಆ) ಕಾಮಗಾರಿಗಳ ಬಾಕಿ ಕಾರ್ಯಭಾರವು ಆಯವ್ಯಯದಲ್ಲಿ ಒದಗಿಸಿದ ಅನುದಾನದ ಶೇ.50 ಕ್ಕಿಂತ ಹೆಚ್ಚಿಗೆಯಿದ್ದು, ಶೇ.100 ಕ್ಕಿಂತ ಕಡಿಮೆಯಿದ್ದಲ್ಲಿ, ಆಯವ್ಯಯ ಅನುದಾನದಲ್ಲಿ ಕನಿಷ್ಠ ಶೇ.60 ರಷ್ಟು ಮೊತ್ತವನ್ನು ಹಂಚಿಕೆ ಮಾಡತಕ್ಕದ್ದು.

(ii) ಅನುಮೋದನೆಯಾದ ಕಾಮಗಾರಿಗಳ ಕಾರ್ಯಭಾರ (Balance Cost of works) ವು ಆಯವ್ಯಯದಲ್ಲಿ ಒದಗಿಸಿದ ಅನುದಾನಕ್ಕಿಂತ ಅಧಿಕವಾಗಿದ್ದಲ್ಲಿ ಆಯವ್ಯಯದಲ್ಲಿನ ಅನುದಾನದಲ್ಲಿ ಕನಿಷ್ಠ ಶೇ.80 ರಷ್ಟು ಮೊತ್ತವನ್ನು ಮುಂದುವರೆದ ಕಾಮಗಾರಿಗಳಿಗೆ ಹಂಚಿಕೆ ಮಾಡತಕ್ಕದ್ದು.

(iii) ಮೇಲಿನಂತೆ ಮುಂದುವರೆದ ಕಾಮಗಾರಿಗಳಿಗೆ ಅನುದಾನ ಹಂಚಿಕೆ ಮಾಡುವ ಸಂಧರ್ಭದಲ್ಲಿ, ಹಂಚಿಕೆ ಮಾಡುವ ವರ್ಷದಲ್ಲಿ ಮುಕ್ತಾಯಗೊಳ್ಳಲು ನಿಗದಿಯಾದ ಕಾಮಗಾರಿಗಳಿಗೆ ಮುಕ್ತಾಯವಾಗಲು ಬೇಕಾದ ಪೂರ್ಣಮೊತ್ತವನ್ನು ಆದ್ಯತೆ ಮೇಲೆ ಕಾಯ್ದಿರಿಸತಕ್ಕದ್ದು.

(iv) ಈಗಾಗಲೇ ಆಡಳಿತಾತ್ಮಕ ಅನುಮೋದನೆ ನೀಡಿದ ಅಂದಾಜು ಮೊತ್ತದಲ್ಲಿ ಯಾವುದೇ ಕಾರಣದಿಂದ ಹೆಚ್ಚಳವಾಗಿದ್ದಲ್ಲಿ/ ಅಂದಾಜು ಪರಿಷ್ಕರಣೆಯಾಗಿದ್ದಲ್ಲಿ, ಅಥವಾ ಪರಿಷ್ಕರಣೆಯಾಗಬಹುದೆಂಬ ನಿರೀಕ್ಷೆಯಿದ್ದಲ್ಲಿ, ಅಂತಹ ವ್ಯತ್ಯಾಸದ ಪೂರ್ಣ ಮೊತ್ತವನ್ನು ಕಾಮಗಾರಿ ಮುಕ್ತಾಯಕ್ಕೆ ನಿಗದಿಪಡಿಸಿದ ಆರ್ಥಿಕ ವರ್ಷದಲ್ಲಿ ಕಡ್ಡಾಯವಾಗಿ ಒದಗಿಸಿಕೊಳ್ಳತಕ್ಕದ್ದು.

2. **ಹೊಸ ಕಾಮಗಾರಿಗಳು:** ಮೇಲಿನಂತೆ ಮುಂದುವರೆದ ಕಾಮಗಾರಿಗಳಿಗೆ ಹಂಚಿಕೆ ಮಾಡಿದ ನಂತರ ಉಳಿಕೆಯಾಗುವ ಆಯವ್ಯಯ ಅನುದಾನಕ್ಕೆ ಸೀಮಿತಗೊಳಿಸಿ, ಈ ಕೆಳಗಿನಂತೆ ಹೊಸ ಕಾಮಗಾರಿಗಳಿಗೆ ಅನುದಾನ ಹಂಚಿಕೆ ಮಾಡತಕ್ಕದ್ದು.

(i) ಆಯವ್ಯಯ ಭಾಷಣದಲ್ಲಿ ಘೋಷಣೆ ಮಾಡಿದ ಹೊಸ ಕಾಮಗಾರಿ/ಕಾರ್ಯ ಯೋಜನೆಗಳಿಗೆ ಆಯವ್ಯಯ ಭಾಷಣದಲ್ಲಿ ಅಥವಾ ಆರ್ಥಿಕ ಇಲಾಖೆಯಿಂದ ನೀಡಿದ ಆಯವ್ಯಯ ಸೂಚನೆಯಲ್ಲಿ ನಿಗದಿಪಡಿಸಿದಂತೆ ಅಗತ್ಯವಾದ ಪೂರ್ಣ ಮೊತ್ತವನ್ನು ಕಾಯ್ದಿರಿಸತಕ್ಕದ್ದು.

(ii) ಮೇಲಿನಂತೆ ಆಯವ್ಯಯ ಭಾಷಣದಲ್ಲಿ ಘೋಷಿಸಿದ ಕಾಮಗಾರಿ / ಕಾರ್ಯಯೋಜನೆಗೆ ಅಗತ್ಯ ಮೊತ್ತವನ್ನು ನಿಗದಿಪಡಿಸಿದ ನಂತರ ಉಳಿಕೆಯಾಗುವ ಮೊತ್ತದಲ್ಲಿ ಈ ಕೆಳಗಿನಂತೆ ಹೊಸ ಕಾಮಗಾರಿಗಳಿಗೆ ಅನುದಾನ ಹಂಚಿಕೆ ಮಾಡತಕ್ಕದ್ದು.

| ಕ್ರ. ಸಂ. | ತೆಗೆದುಕೊಳ್ಳಲು ಉದ್ದೇಶಿಸಿದ ಕಾಮಗಾರಿ ಮೊತ್ತ | ಹಂಚಿಕೆ ಮಾಡಬೇಕಾದ ಅನುದಾನದ ಮೊತ್ತ |
|---|---|---|
| 1. | ರೂ.10.00 ಕೋಟಿ ಮೊತ್ತದವರೆಗಿನ ಕಾಮಗಾರಿಗಳು | ಶೇ.100 ರಷ್ಟು ಮೊತ್ತವನ್ನು ಒಂದೇ ಆರ್ಥಿಕ ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು. |
| 2. | ರೂ.10.00 ಕೋಟಿ ಮೊತ್ತ ಮೀರಿದ ಮತ್ತು ರೂ.100.00 ಕೋಟಿವರೆಗಿನ ಕಾಮಗಾರಿಗಳು | a. ಮೊದಲನೇ ಆರ್ಥಿಕ ವರ್ಷದಲ್ಲಿ ಶೇ.40 ರಷ್ಟು<br>b. ಎರಡನೇ ಆರ್ಥಿಕ ವರ್ಷದಲ್ಲಿ ಶೇ.60 ರಷ್ಟು ಮೊತ್ತವನ್ನು ಹಂಚಿಕೆ ಮಾಡತಕ್ಕದ್ದು. |
| 3. | ರೂ.100.00 ಕೋಟಿ ಮೊತ್ತ ಮೀರಿದ ಎಲ್ಲಾ ಕಾಮಗಾರಿಗಳು | (ಅ) ಮೊದಲನೇ ಆರ್ಥಿಕ ವರ್ಷದಲ್ಲಿ ಶೇ.30 ರಷ್ಟು;<br>(ಆ) ಎರಡನೇ ಆರ್ಥಿಕ ವರ್ಷದಲ್ಲಿ ಶೇ.40 ರಷ್ಟು; ಮತ್ತು<br>(ಇ) ಮೂರನೇ ಆರ್ಥಿಕ ವರ್ಷದಲ್ಲಿ ಶೇ.30ರಷ್ಟು; ಅನುದಾನ ಒದಗಿಸಿಕೊಳ್ಳತಕ್ಕದ್ದು. |

<u>**ಉದಾಹರಣೆ - 1 :**</u>

(i) ಒಂದು ಆರ್ಥಿಕ ವರ್ಷದಲ್ಲಿ ರೂ.100 ಕೋಟಿಗಳ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಿದ್ದಲ್ಲಿ ಮತ್ತು ರೂ.40.00 ಕೋಟಿ ಮೊತ್ತದ (ಆಯವ್ಯಯ ಅನುದಾನದ ಶೇ.50 ಕ್ಕಿಂತ ಕಡಿಮೆ) ಮುಂದುವರೆದ ಕಾಮಗಾರಿಗಳಿದ್ದಲ್ಲಿ, ಮುಂದುವರೆದ ಕಾಮಗಾರಿಗಳಿಗೆ ಪೂರ್ಣ ಮೊತ್ತ ರೂ.40.00 ಕೋಟಿಗಳನ್ನು ಕಾಯ್ದಿರಿಸತಕ್ಕದ್ದು.

(ii) ಉಳಿಕೆ ರೂ.60.00 ಕೋಟಿ ಮೊತ್ತಕ್ಕೆ ಮಾತ್ರ ಸೀಮಿತಗೊಳಿಸಿ, ಆಯವ್ಯಯದಲ್ಲಿ ಘೋಷಿತ ಕಾಮಗಾರಿಯೂ ಸೇರಿದಂತೆ ಹೊಸ ಕಾಮಗಾರಿಗಳಿಗೆ ಕೆಳಕಂಡಂತೆ ಅನುದಾನ ಹಂಚಿಕೆ ಮಾಡತಕ್ಕದ್ದು.

(ಅ) ತೆಗೆದುಕೊಳ್ಳಬೇಕಾದ ಎಲ್ಲಾ ಹೊಸ ಕಾಮಗಾರಿಗಳು ರೂ.10.00 ಕೋಟಿ ಮೊತ್ತದವರೆಗಿನ ಅಂದಾಜು ಮೊತ್ತವನ್ನು ಹೊಂದಿದ್ದಲ್ಲಿ ಹಂಚಿಕೆ ಮಾಡಬೇಕಾದ ಆರ್ಥಿಕ ವರ್ಷದಲ್ಲಿ ಒಂದೇ ಬಾರಿಗೆ ಪೂರ್ಣ ಮೊತ್ತವನ್ನು ಒದಗಿಸಬೇಕಾಗಿರುವುದರಿಂದ ರೂ.60.00 ಕೋಟಿಗಳಿಗೆ ಮಾತ್ರ ಸೀಮಿತಗೊಳಿಸಿ ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳತಕ್ಕದ್ದು.

(ಆ) ತೆಗೆದುಕೊಳ್ಳಬೇಕಾದ ಎಲ್ಲಾ ಹೊಸ ಕಾಮಗಾರಿಗಳು ರೂ.10.00 ಕೋಟಿ ಮೀರಿದ ಮತ್ತು ರೂ.100.00 ಕೋಟಿ ಅಂದಾಜು ಹೊಂದಿದ್ದಲ್ಲಿ ಕಾಮಗಾರಿ/ಕಾರ್ಯ ಯೋಜನೆಯನ್ನು ಎರಡು ಆರ್ಥಿಕ ವರ್ಷಕ್ಕೆ ವಿಸ್ತರಿಸಬೇಕಾಗಿರುವುದರಿಂದ ರೂ.120.00 ಕೋಟಿ ಮೊತ್ತದ ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳಬಹುದು.

(ಇ) ಒಂದು ವೇಳೆ ತೆಗೆದುಕೊಳ್ಳಬೇಕಾದ ಎಲ್ಲಾ ಕಾಮಗಾರಿಗಳು ರೂ.100.00 ಕೋಟಿ ಮೀರಿದ ಕಾಮಗಾರಿಗಳಾಗಿದ್ದಲ್ಲಿ ಮೂರು ಆರ್ಥಿಕ ವರ್ಷಗಳಿಗೆ ವಿಸ್ತರಿಸಬೇಕಾಗಿರುವುದರಿಂದ ರೂ.180.00 ಕೋಟಿ ಮೊತ್ತದ ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳಬಹುದು.

(ಈ) ತೆಗೆದುಕೊಳ್ಳಬೇಕಾದ ಕಾಮಗಾರಿಗಳು ಮೇಲಿನ ಎಲ್ಲಾ ಪ್ರವರ್ಗದ ಕಾಮಗಾರಿಗಳಾಗಿದ್ದಲ್ಲಿ, ಆಯಾ ಪ್ರವರ್ಗಕ್ಕೆ ಅನುಗುಣವಾಗಿ ಶೇ.100, ಶೇ.50 ಮತ್ತು ಶೇ.30ರಷ್ಟು ಅನುದಾನವನ್ನು ಹಂಚಿಕೆ ಮಾಡಿ ಕಾಮಗಾರಿಗಳನ್ನು ತೆಗೆದುಕೊಳ್ಳಬಹುದು.

**ಉದಾಹರಣೆ - 2** :

(ಅ) ಒಂದು ಆರ್ಥಿಕ ವರ್ಷದಲ್ಲಿ ರೂ.100.00 ಕೋಟಿಗಳನ್ನು ಆಯವ್ಯಯದಲ್ಲಿ ಒದಗಿಸಿದ್ದು, ರೂ.90.00 ಕೋಟಿ ಮೊತ್ತದ ಮುಂದುವರೆದ ಕಾಮಗಾರಿಗಳಿದ್ದಲ್ಲಿ, ರೂ.60.00 ಕೋಟಿಗಳನ್ನು ಮುಂದುವರೆದ ಕಾಮಗಾರಿಗಳಿಗೆ ಹಂಚಿಕೆ ಮಾಡತಕ್ಕದ್ದು.

(ಆ) ತದನಂತರ, ಹೊಸ ಕಾಮಗಾರಿಗಳಿಗೆ ರೂ.40.00 ಕೋಟಿ ಉಳಿಕೆಯಾಗುತ್ತಿದ್ದು, ರೂ.10.00 ಕೋಟಿವರೆಗಿನ ಕಾಮಗಾರಿಗಳಾಗಿದ್ದಲ್ಲಿ, ಗರಿಷ್ಠ ರೂ.40.00 ಕೋಟಿ ಮೊತ್ತದ ಕಾಮಗಾರಿಗಳನ್ನು; ರೂ.10.00 ಕೋಟಿಯಿಂದ ರೂ.100.00 ಕೋಟಿವರೆಗಿನ ಕಾಮಗಾರಿಗಳಾಗಿದ್ದಲ್ಲಿ, ಎರಡು ವರ್ಷಕ್ಕೆ ವಿಸ್ತರಿಸಿ ರೂ.80.00 ಕೋಟಿ ಮೊತ್ತದ ಮತ್ತು ರೂ.100.00 ಕೋಟಿ ಮೀರಿದ ಕಾಮಗಾರಿಗಳಾಗಿದ್ದಲ್ಲಿ ಮೂರು ವರ್ಷಕ್ಕೆ ವಿಸ್ತರಿಸಿ, ರೂ.120.00 ಕೋಟಿ ಮೊತ್ತದ ಹೊಸ ಕಾಮಗಾರಿಗಳನ್ನು ಮಾತ್ರ ತೆಗೆದುಕೊಳ್ಳತಕ್ಕದ್ದು.

**ಉದಾಹರಣೆ - 3** :

(ಅ) ಒಂದು ಆರ್ಥಿಕ ವರ್ಷದಲ್ಲಿ ರೂ.100.00 ಕೋಟಿಗಳನ್ನು ಆಯವ್ಯಯದಲ್ಲಿ ಒದಗಿಸಿದ್ದು, ರೂ.100.00 ಕೋಟಿಗಿಂತ ಹೆಚ್ಚಿನ ಮೊತ್ತದ ಮುಂದುವರೆದ ಕಾಮಗಾರಿಗಳಿದ್ದಲ್ಲಿ, ಕನಿಷ್ಠ ರೂ.80.00 ಕೋಟಿಗಳನ್ನು ಮುಂದುವರೆದ ಕಾಮಗಾರಿಗಳಿಗೆ ಹಂಚಿಕೆ ಮಾಡತಕ್ಕದ್ದು.

(ಆ) ಹೊಸ ಕಾಮಗಾರಿಗಳಿಗೆ ರೂ.20.00 ಕೋಟಿ ಮಾತ್ರ ಉಳಿಕೆಯಾಗುತ್ತಿದ್ದು, ರೂ.10.00 ಕೋಟಿವರೆಗಿನ ಅಂದಾಜು ಮೊತ್ತದ ಕಾಮಗಾರಿಗಳಾಗಿದ್ದಲ್ಲಿ, ಒಂದೇ ವರ್ಷದಲ್ಲಿ ಅನುಷ್ಠಾನವು ಸೀಮಿತವಾಗುವುದರಿಂದ ರೂ.20.00 ಕೋಟಿ ಮೊತ್ತದ ಕಾಮಗಾರಿಗಳನ್ನು; ರೂ.10.00 ಕೋಟಿಯಿಂದ ರೂ.100.00 ಕೋಟಿವರೆಗಿನ ಅಂದಾಜು ಮೊತ್ತದ ಕಾಮಗಾರಿಗಳಾಗಿದ್ದಲ್ಲಿ, ಎರಡು ವರ್ಷಕ್ಕೆ ವಿಸ್ತರಿಸಿ, ರೂ.40 ಕೋಟಿ ಮೊತ್ತದ ಹಾಗೂ ರೂ.100.00 ಕೋಟಿ ಮೀರಿದ ಅಂದಾಜು ಮೊತ್ತದ ಕಾಮಗಾರಿಗಳಾಗಿದ್ದಲ್ಲಿ, ಮೂರು ವರ್ಷಕ್ಕೆ ವಿಸ್ತರಿಸಿ ರೂ.60.00 ಕೋಟಿ ಮೊತ್ತದ ಹೊಸ ಕಾಮಗಾರಿಗಳನ್ನು ಮಾತ್ರ ತೆಗೆದುಕೊಳ್ಳತಕ್ಕದ್ದು.

3. ಮೇಲಿನ ಮಾರ್ಗಸೂಚಿಗಳ ಅನ್ವಯವೇ ಅನುದಾನ ಹಂಚಿಕೆಯನ್ನು ಮಾಡತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಮೇಲ್ಕಂಡ ಅನುದಾನ ಹಂಚಿಕೆ ಸೂತ್ರವನ್ನು ಆಡಳಿತ ಇಲಾಖೆಯ ಹಂತದಲ್ಲಿ ಬದಲಾಯಿಸತಕ್ಕದ್ದಲ್ಲ.

4. ಮೇಲಿನಂತೆ ಆಯವ್ಯಯವನ್ನು ಹಂಚಿಕೆ ಮಾಡಿದ ನಂತರ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು KPWD CODE PARA (92) ರಲ್ಲಿ ನಿರ್ದಿಷ್ಟಪಡಿಸಿದಂತೆ ಕಾಮಗಾರಿಯ ವಿವರವಾದ ಅಂದಾಜನ್ನು ತಯಾರಿಸತಕ್ಕದ್ದು ಮತ್ತು ಇಂತಹ ಅಂದಾಜನ್ನು ಚಾಲ್ತಿಯಲ್ಲಿರುವ ಪ್ರಕಟಿತ ಏಕರೂಪ ಅನುಸೂಚಿ ದರಗಳ (Present Uniform Scheduled of Rates) ಅನ್ವಯವೇ ತಯಾರಿಸತಕ್ಕದ್ದು. ಈ ರೀತಿ ತಯಾರಿಸಿದ ಅಂದಾಜಿನಲ್ಲಿ ಮುಂದಿನ ದಿನಗಳಲ್ಲಿ ಅಂದಾಜು ಪರಿಷ್ಕರಣೆಗೆ ಅವಕಾಶವಾಗದ ರೀತಿಯಲ್ಲಿ Electrical & Special Fittings or Fixtures, Lift, ಆವರಣ ಗೋಡೆ, ಪೀಠೋಪಕರಣಗಳು ಹಾಗೂ ಎಲ್ಲಾ ಪ್ರಾಸಂಗಿಕ ಕಾಮಗಾರಿಗಳನ್ನು ಅಳವಡಿಸತಕ್ಕದ್ದು. ಯಾವುದೇ ಕಾರಣಕ್ಕೂ ಅಂದಾಜನ್ನು ಸೀಮಿತಗೊಳಿಸಲು ಅಥವಾ ಕಡಿಮೆ ಮಾಡಲು ಅವಶ್ಯಕ ಕಾಮಗಾರಿ ಅಥವಾ ಅದರ ಘಟಕ (Item of work) ಗಳನ್ನು ಕೈಬಿಡತಕ್ಕದ್ದಲ್ಲ. ಒಂದು ವೇಳೆ ಕಾಮಗಾರಿ ಅನುಷ್ಠಾನ ಸಮಯದಲ್ಲಿ ಅಂದಾಜು ಪರಿಷ್ಕರಣೆಯು ಅನಿವಾರ್ಯ ಮತ್ತು ಅಗತ್ಯವಾಗಿದ್ದಲ್ಲಿ ಸಕ್ಷಮ ಪ್ರಾಧಿಕಾರದ ಪೂರ್ವಾನುಮೋದನೆ ಪಡೆದ ನಂತರವೇ ಅಂತಹ ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು. ಆದಾಗ್ಯೂ ಇಂತಹ ಪರಿಷ್ಕೃತ ಅಂದಾಜು ಯಾವುದೇ ಕಾರಣಕ್ಕೂ ಮೂಲ ಅಂದಾಜಿನ ಮೇಲೆ ಗರಿಷ್ಠ ಶೇ.30ನ್ನು ಮೀರತಕ್ಕದ್ದಲ್ಲ.

5. ಮೇಲಿನ ಎಲ್ಲಾ ಮಾರ್ಗಸೂಚಿಗಳನ್ನು ಅನುದಾನ ಹಂಚಿಕೆ ಮತ್ತು ಅಂದಾಜು ತಯಾರಿಕೆಯಲ್ಲಿ ಕಡ್ಡಾಯವಾಗಿ ಪಾಲಿಸಿರುವ ಕುರಿತು ಖಚಿತಪಡಿಸಿಕೊಳ್ಳುವುದು ಆಯಾ ಆಡಳಿತ ಇಲಾಖೆಯ ಜವಾಬ್ದಾರಿಯಾಗಿರುತ್ತದೆ.

6. ಈ ಆದೇಶವು ಸರ್ಕಾರದ ಎಲ್ಲಾ ಇಲಾಖೆಗಳು, ಸರ್ಕಾರದಿಂದ ಅನುದಾನ ಪಡೆಯುವ ಸರ್ಕಾರದ ಅಧೀನದ ನಿಗಮ, ಮಂಡಳಿ, ಸ್ವಾಯತ್ತ ಸಂಸ್ಥೆಗಳು, ಪಂಚಾಯತ್ ರಾಜ್ ಸಂಸ್ಥೆಗಳು, ನಗರ ಸ್ಥಳೀಯ ಸಂಸ್ಥೆಗಳು ವಿಶ್ವವಿದ್ಯಾನಿಲಯಗಳು ಮತ್ತು ಪ್ರಾಧಿಕಾರಗಳಿಗೆ ಅನ್ವಯವಾಗುತ್ತದೆ.

7. ಮೇಲಿನ ಮಾರ್ಗಸೂಚಿಗಳು ಕೇಂದ್ರ ಯೋಜನಾ ಕಾರ್ಯಕ್ರಮಗಳು, ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳು ಹಾಗೂ ವಿದೇಶಿ ನೆರವಿನ ಯೋಜನೆ(EAP)ಗಳಿಗೆ ಅನ್ವಯವಾಗುವುದಿಲ್ಲ.

8. ಮೇಲಿನಂತೆ ಅನುದಾನ ಹಂಚಿಕೆ ಮಾಡಿದ ಕಾರ್ಯ ಯೋಜನೆಗಳ / ಕಾಮಗಾರಿಗಳ ಅಂದಾಜು ಮೌಲ್ಯವು ರೂ.10.00ಕೋಟಿಗಳನ್ನು ಮೀರುತ್ತಿದ್ದಲ್ಲಿ ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು, 1977 ರಂತೆ ಸಚಿವ ಸಂಪುಟದ ಅನುಮೋದನೆ ಪಡೆದು ಕಾಮಗಾರಿಯನ್ನು ಅನುಷ್ಠಾನಗೊಳಿಸತಕ್ಕದ್ದು.

9. ಸಂಬಂಧಪಟ್ಟ ಎಲ್ಲಾ ಇಲಾಖೆ ಮತ್ತು ಸಂಸ್ಥೆಗಳು ಮೇಲಿನಂತೆ ನಿಗದಿಪಡಿಸಿದ ಆಯವ್ಯಯ ಹಂಚಿಕೆ ಮಿತಿ ಮತ್ತು ಕಾಲಮಿತಿಯನ್ನು ಮೀರದಂತೆ ಕ್ರಮವಹಿಸತಕ್ಕದ್ದು ಮತ್ತು ಕ್ರಿಯಾ ಯೋಜನೆ/ಅಪೆಂಡಿಕ್ಸ್–ಇ ತಯಾರಿಸುವ ಸಂದರ್ಭದಲ್ಲಿ ಕಟ್ಟುನಿಟ್ಟಾಗಿ ಈ ಮಾರ್ಗಸೂಚಿಗಳನ್ನು ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ

ಮತ್ತು ಅವರ ಹೆಸರಿನಲ್ಲಿ,

**(ಕಾಂತಮ್ಮ ಎನ್. ಎಂ)**

ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ.

ಇವರಿಗೆ:

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು.
3. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು.